# ಸಂಜೆವಾಣಿ

1982

ಬೆಂಗಳೂರು • ಹುಬ್ಬಳ್ಳಿ • ಕಲಬುರಗಿ • ಬಳ್ಳಾರಿ • ಮೈಸೂರು • ಮಂಗಳೂರು **ಹೊಸತನದ ಹರಿಕಾರ – ಪರಂಪರೆಯ ವಕ್ತಾರ** ರಾಯಚೂರು • ದಾವಣಗೆರೆ • ತುಮಕೂರು • ಶಿವಮೊಗ್ಗ

ಬೆಂಗಳೂರು ಶುಕ್ರವಾರ 7–4–2017 ಕನ್ನಡ ದಿನಪತ್ರಿಕೆ ಸಂಪುಟ 35 ಸಂಚಿಕೆ 117 ಪುಟ 8 ಬೆಲೆ ₹ 3.00 RNI No.36667/82 Ph.22868882 Fax:080-22868484 sanjevani.com e-mail:sanjevani@gmail.com

KUBERAN
SILK • SAREES • DRESS MATERIAL • MEN'S WEAR • KID'S WEAR
The First ISO Certified Saree Showroom in Karnataka
# 226, Chickpet, Bangalore - 560 053
Ph : 4124 1799, 2220 6514

## ಸೆಕ್ಯುರಿಟಿ ಗಾರ್ಡ್ ಆತ್ಮಹತ್ಯೆ

ಬೆಂಗಳೂರು,ಏ.7–ಜೀವನದಲ್ಲಿನ ಜುಗುಪ್ಸೆಯಿಂದ ಸೆಕ್ಯುರಿಟಿ ಗಾರ್ಡ್‌ರೊಬ್ಬರು ನೇಣಿಗೆ ಶರಣಾಗಿರುವ ದುರ್ಘಟನೆ ನಾರಾಯಣಪುರದ 11ನೇ ಕ್ರಾಸ್‌ನಲ್ಲಿ ನಿನ್ನೆ ರಾತ್ರಿ ನಡೆದಿದೆ.

ಪಾರ್ಲೆ ಏಜೆನ್ಸಿಯಲ್ಲಿ ಸೆಕ್ಯುರಿಟಿಗಾರ್ಡ್ ಆಗಿದ್ದ ಅಶೋಕ್ ರಾವ್ (45) ಆತ್ಮಹತ್ಯೆ ಮಾಡಿಕೊಂಡವರು. ನಿನ್ನೆ ಕೆಲಸಕ್ಕೆ ಹೋಗದೆ ಮನೆಯಲ್ಲಿದ್ದ ರಾವ್, ಪತ್ನಿ ಕವಿತಾಬಾಯಿ ಕೆಲಸಕ್ಕೆ ಹೋದ ನಂತರ ಫ್ಯಾನಿಗೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಶೋಕ್‌ರಾವ್ ಅವರ ಆತ್ಮಹತ್ಯೆಗೆ ನಿಖರ ಕಾರಣಗಳು ತಿಳಿದು ಬಂದಿಲ್ಲ. ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಈ ಕೃತ್ಯ ನಡೆದಿರಬಹುದೆಂದು ಶಂಕಿಸಲಾಗಿದೆ. ಪ್ರಕರಣ ದಾಖಲಿಸಿರುವ ಮಹದೇವಪುರ ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಲಕ್ಷಾಂತರ ವಿದೇಶಿ ಹಣ ಕಳವು

ಬೆಂಗಳೂರು, ಏ. 7–ಕಿಟಕಿಯ ಗ್ರಿಲ್ ಬಿಚ್ಚಿ ಒಳನುಗ್ಗಿರುವ ದುಷ್ಕರ್ಮಿಗಳು ಅಮೆರಿಕನ್ ಡಾಲರ್, ಆಸ್ಟ್ರೇಲಿಯನ್ ಕರೆನ್ಸಿ ಸೇರಿದಂತೆ ಲಕ್ಷಾಂತರ ಮೌಲ್ಯದ ವಸ್ತುಗಳನ್ನು ದೋಚಿ ಪರಾರಿಯಾಗಿರುವ ದುರ್ಘಟನೆ ಇಂದಿರಾ ನಗರದಲ್ಲಿ ನಿನ್ನೆ ರಾತ್ರಿ ನಡೆದಿದೆ.

ಇಂದಿರಾ ನಗರದ 17ನೇ ಕ್ರಾಸ್‌ನ ಇವೆಂಟ್ ಮ್ಯಾನೇಜ್‌ಮೆಂಟ್ ನಡೆಸುತ್ತಿದ್ದ ನಳಿನಿ ಉಪಾಧ್ಯಾಯ ಅವರ 2ನೇ ಮಹಡಿಯಲ್ಲಿದ್ದ ಮನೆಯ ಕಿಟಕಿಯ ಗ್ರಿಲ್ ಕಂಬಿಯನ್ನು ಸ್ಕ್ರೂಡ್ರೈವರ್‌ನಿಂದ ರಾತ್ರಿ 10.30ರ ವೇಳೆ ಬಿಚ್ಚಿ ತೆಗೆದು ಒಳ ನುಗ್ಗಿದ್ದಾರೆ.

ಕಬೋರ್ಡ್‌ನಲ್ಲಿದ್ದ ಆಸ್ಟ್ರೇಲಿಯನ್ ಕರೆನ್ಸಿ, ಅಮೆರಿಕನ್ ಡಾಲರ್ ಹಾಗೂ ಭಾರತೀಯ ರೂಪಾಯಿ ಸೇರಿದಂತೆ ಲಕ್ಷಾಂತರ ಮೌಲ್ಯದ ನಗದು, ಇನ್ನಿತರ ವಸ್ತುಗಳನ್ನು ದೋಚಿ ಪರಾರಿಯಾಗಿದ್ದಾರೆ.

## ಐಪಿಎಲ್ 2017



**ಇಂದಿನ ಪಂದ್ಯ**

ಗುಜರಾತ್ ಲಯನ್ಸ್
V/s
ಕೋಲ್ಕತಾ ನೈಟ್ ರೈಡರ್ಸ್

ಸಮಯ: ರಾತ್ರಿ 8ಕ್ಕೆ
ಸ್ಥಳ: ರಾಜ್‌ಕೋಟ್

'ಮೊದಲ ರಾಷ್ಟ್ರೀಯ ಪ್ರಶಸ್ತಿ ನಿರೀಕ್ಷೆ ಮಾಡಿರಲಿಲ್ಲ. ಪ್ರಶಸ್ತಿ ಸಿಕ್ಕಿರುವುದು ಖುಷಿ ಕೊಟ್ಟಿದೆ. ನೂರಾರು ಚಿತ್ರಗಳಲ್ಲಿ ಕೆಲಸ ಮಾಡಿದ ನಂತರ ಪ್ರಶಸ್ತಿ ಸಿಕ್ಕಿರುವುದು ಸಂತಸಕ್ಕೆ ಪಾರವೇ ಇಲ್ಲ.'

–ಮೇಕಪ್ ರಾಮಕೃಷ್ಣ



- 64ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರಕಟ
- 'ರಿಸರ್ವೇಷನ್' ಅತ್ಯುತ್ತಮ ಕನ್ನಡ ಪ್ರಾದೇಶಿಕ ಚಿತ್ರ
- 'ಅಲ್ಲಮ' ಚಿತ್ರದ ಸಂಗೀತ, ಹಿನ್ನಲೆ ಸಂಗೀತ, ಪ್ರಸಾದನಕ್ಕಾಗಿ ಪ್ರಶಸ್ತಿ
- 'ರೈಲ್ವೆ ಚಿಲ್ಡ್ರನ್' ಚಿತ್ರಕ್ಕಾಗಿ ಬಾಲನಟ ಪ್ರಶಸ್ತಿ
- ತುಳು 'ಮದಿಪು' ಚಿತ್ರಕ್ಕೂ ಪ್ರಶಸ್ತಿ

- 'ರುಸ್ತುಂ' ಚಿತ್ರದ ನಟನೆಗಾಗಿ ಅಕ್ಷಯ್ ಕುಮಾರ್‌ಗೆ ಅತ್ಯುತ್ತಮ ನಟ.
- 'ಮಿನ್ನು ಮಿನಂಗು' ಮಲಯಾಳಂ ಚಿತ್ರಕ್ಕೆ ಸುರಭಿ ಲಕ್ಷ್ಮಿಗೆ ಅತ್ಯುತ್ತಮ ನಟಿ.
- 'ಧಂಗಲ್' ಚಿತ್ರಕ್ಕಾಗಿ ಜಾಹೀರಾ ವಾಸಿ ಪೋಷಕ ನಟಿ.
- ಮೋಹನ್‌ಲಾಲ್ ಅವರಿಗೆ 'ಜೂರಿ' ವಿಶೇಷ ಪ್ರಶಸ್ತಿ.
- 'ನೀರ್ಜಾ'ಗೆ ಹಿಂದಿಯ ಉತ್ತಮ ಚಿತ್ರ ಪ್ರಶಸ್ತಿ.
- ಹಿಂದಿಯ 'ಪಿಂಕ್' ಸಾಮಾಜಿಕ ಕಳಕಳಿಯ ಚಿತ್ರ.

# ಕನ್ನಡಕ್ಕೆ 5 ಚಿನ್ನದ ಗರಿ




## ಅಲ್ಲಮ, ರಿಸರ್ವೇಶನ್, ರೈಲ್ವೆ ಚಿಲ್ಡ್ರನ್, ಮದಿಪು ತುಳು ಚಿತ್ರಕ್ಕೆ ಪ್ರಶಸ್ತಿ ಹಿರಿಮೆ

ನವದೆಹಲಿ, ಏ. 7– 64ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು ದೆಹಲಿಯಲ್ಲಿಂದು ಪ್ರಕಟಿಸಲಾಗಿದೆ. ಮರಾಠಿಯ 'ಕಸವ್' ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಭಾಜನರಾಗಿದ್ದು, ಬಾಲಿವುಡ್‌ನ 'ರುಸ್ತುಂ' ಚಿತ್ರದ ನಟನೆಗಾಗಿ ಅಕ್ಷಯ್ ಕುಮಾರ್, ಮಲೆಯಾಳಂ 'ಮಿನ್ನ ಮಿನುಂಗು' ಚಿತ್ರದ ನಟನೆಗಾಗಿ ಸುರಭಿಲಕ್ಷ್ಮಿ ಕ್ರಮವಾಗಿ ಅತ್ಯುತ್ತಮ ನಟ– ನಟಿ ಪ್ರಶಸ್ತಿ ಗರಿ ಮುಡಿಗೇರಿದೆ.

ಕನ್ನಡದ 'ರಿಸರ್ವೇಷನ್' ಚಿತ್ರ ಅತ್ಯುತ್ತಮ ಪ್ರಾದೇಶಿಕ ಚಿತ್ರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ಇದರ ಜೊತೆಗೆ 'ಅಲ್ಲಮ' ಚಿತ್ರಕ್ಕಾಗಿ ಸಂಗೀತ ನಿರ್ದೇಶಕ ಹಾಗೂ ಹಿನ್ನೆಲೆ ಸಂಗೀತಕ್ಕಾಗಿ ಬಾಪು ಪದ್ಮನಾಭ, ಪ್ರಸಾದನಕ್ಕಾಗಿ ಎಂ.ಕೆ. ರಾಮಕೃಷ್ಣ ಪ್ರಶಸ್ತಿ ಪಡೆದಿದ್ದಾರೆ. 'ಮುಡಿಪು' ಅತ್ಯುತ್ತಮ ತುಳು ಚಿತ್ರ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದ್ದು, ಕೊಂಕಣಿಯ ಚಿತ್ರ 'ದಿ ಝುರಾ ಝುರಾ' ಪ್ರಶಸ್ತಿ ಪಡೆದಿದೆ.

ಕನ್ನಡದ 'ರೈಲ್ವೆ ಚಿಲ್ಡ್ರನ್' ನಟನೆಗಾಗಿ ಮನೋಹರ್, ಬಾಲನಟ ಪ್ರಶಸ್ತಿಯನ್ನು ಪಡೆದಿದ್ದು, ಕನ್ನಡಕ್ಕೆ 5, ತುಳುಗೆ 1 ಪ್ರಶಸ್ತಿ ಬಂದಿವೆ.

ಸಾಮಾಜಿಕ ಕಳಕಳಿ ಬೀರುವ ಚಿತ್ರ ಹಿಂದಿಯ 'ಪಿಂಕ್' ಪಾಲಾಗಿದೆ. ಚೊಚ್ಚಲ ನಿರ್ದೇಶನಕ್ಕಾಗಿ ನೀಡುವ ಇಂದಿರಾಗಾಂಧಿ ಪ್ರಶಸ್ತಿ 'ಆಲಿಫಾ'ಗೆ ಸಂದಿದೆ. ಅತ್ಯುತ್ತಮ ಮಕ್ಕಳ ಚಿತ್ರ ನಾಗೇಶ್ ಕುಕನೂರ್ ಅವರ 'ಧನಕ್'ಗೆ ಸಂದಿದೆ. ಜೂರಿ ಪ್ರಶಸ್ತಿಯ ಮಲೆಯಾಳಂ ನಟ ಮೋಹನ್‌ಲಾಲ್ ಅವರ ಪಾಲಾಗಿದ್ದು, ತೆಲುಗಿನ 'ಶತಮಾನ ಭವತಿ' ಚಿತ್ರ ಮನರಂಜನಾ ಚಿತ್ರ ಪ್ರಶಸ್ತಿ ಪಡೆದಿದೆ.

ದೆಹಲಿಯಲ್ಲಿಂದು ಚಲನಚಿತ್ರ ಆಯ್ಕೆ ಸಮಿತಿಯ ಅಧ್ಯಕ್ಷ ಪ್ರಿಯದರ್ಶನ್ ಸುದ್ದಿಗೋಷ್ಠಿಯಲ್ಲಿ ಪ್ರಶಸ್ತಿ ವಿಜೇತ ಚಿತ್ರಗಳನ್ನು ಪ್ರಕಟಿಸಿದರು. ಅತ್ಯುತ್ತಮ ಪರಿಸರ ಚಿತ್ರ ಪ್ರಶಸ್ತಿ 'ದಿ ಟೈಗರ್ ಹೂ ಕ್ರಾಸ್ಡ್ ಲೈನ್' ಚಿತ್ರಕ್ಕೆ ಬಂದಿದೆ. 'ಧಂಗಲ್' ಚಿತ್ರದ ನಟನೆಗಾಗಿ ಜಹೀರಾವಾಸಿ ಪೋಷಕ ನಟಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ತಮಿಳಿನ ಜೋಕರ್ ಚಿತ್ರದ ಹಾಡಿಗಾಗಿ ಸುಂದರಯ್ಯರ್ ಹಾಗೂ ಬೆಂಗಾಲಿಯ 'ಪ್ರಕ್ತಾನ್' ಚಿತ್ರದ ಹಾಡಿಗಾಗಿ ಇಮಾನ್ ಚಕ್ರವರ್ತಿ ಗಾಯಕ–ಗಾಯಕಿ ಪ್ರಶಸ್ತಿ ಪಡೆದಿದ್ದಾರೆ. (2)

## ಗುಣಮಟ್ಟದ ಆರೋಗ್ಯ ಚಿಕಿತ್ಸೆ ಒದಗಿಸಲು ಬದ್ಧ: ಪ್ರಧಾನಿ



ನವದೆಹಲಿ, ಏ.7 –ದೇಶದ ಜನತೆಗೆ ಕೈಗೆಟಕುವ ಹಾಗೂ ಅಗ್ಗದ ದರದಲ್ಲಿ ಗುಣಮಟ್ಟದ ಆರೋಗ್ಯ ಚಿಕಿತ್ಸೆ ದೊರೆಯುವಂತೆ ಮಾಡಲು ಸರ್ಕಾರ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರಮೋದಿ ಹೇಳಿದ್ದಾರೆ.

ವಿಶ್ವ ಆರೋಗ್ಯ ದಿನವಾದ ಇಂದು ಅವರು ದೇಶದ ಜನತೆಗೆ ಭಗವಂತ ಆಯೂರಾರೋಗ್ಯ ಕರುಣಿಸಲಿ ಮತ್ತು ಅವರ ಕನಸುಗಳು ನನಸಾಗುವಂತೆ ಆಗಲಿ ಎಂದು ಟ್ವೀಟ್ ಸಂದೇಶದಲ್ಲಿ ಪ್ರಾರ್ಥಿಸಿದ್ದಾರೆ. ಆರೋಗ್ಯ ಚಿಕಿತ್ಸೆ ವಿಚಾರದಲ್ಲಿ ತಮ್ಮ ಸರ್ಕಾರ ವಿಶೇಷ ಗಮನ ಹರಿಸಿದ್ದು, ಜನಸಾಮಾನ್ಯರಿಗೆ ಕೈಗೆಟಕುವ ಮತ್ತು ಅಗ್ಗದ ದರದಲ್ಲಿ ಚಿಕಿತ್ಸಾ ಸೌಲಭ್ಯಗಳು ಸಿಗುವಂತೆ ಮಾಡಲು ಬದ್ಧವಾಗಿದೆ ಎಂದಿದ್ದಾರೆ. ಇತ್ತೀಚೆಗೆ ಸರ್ಕಾರ ಅನುಮೋದನೆ ನೀಡಿರುವ ರಾಷ್ಟ್ರೀಯ ಆರೋಗ್ಯ ನೀತಿ ಸಮಗ್ರವಾಗಿದ್ದು, ಮತ್ತು ನಾಗರಿಕ ಸ್ನೇಹಿಯಾಗಿದೆ ಎಂದು ತಿಳಿಸಿದ್ದಾರೆ.

ಈ ವರ್ಷದ ವಿಶ್ವ ಆರೋಗ್ಯ ದಿನದ ಧ್ಯೇಯವಾಕ್ಯ ಖಿನ್ನತೆಯಾಗಿದೆ. ಇದನ್ನು ದೂರ ಮಾಡುವ ಸಂಬಂಧ ಇತ್ತೀಚಿನ ಆಕಾಶವಾಣಿ ಸರಣಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ತಾವು ಮಾತನಾಡಿರುವುದರಲ್ಲಿ ಪ್ರಧಾನಿ ಹೇಳಿದ್ದಾರೆ.

## ರುದ್ರೇಶ್ ಹತ್ಯೆ ಎನ್‌ಐಎ ತನಿಖೆಗೆ

ಬೆಂಗಳೂರು, ಏ. 7 – ಆರ್‌ಎಸ್‌ಎಸ್ ಕಾರ್ಯಕರ್ತ ರುದ್ರೇಶ್ ಹತ್ಯೆ ಪ್ರಕರಣವನ್ನು ರಾಷ್ಟ್ರೀಯ ತನಿಖಾ ತಂಡದಿಂದ ತನಿಖೆ ಮುಂದುವರೆಸುವಂತೆ ಹೈಕೋರ್ಟ್ ವಿಭಾಗೀಯ ಪೀಠ ಆದೇಶಿಸಿದೆ.

ರಾಷ್ಟ್ರೀಯ ತನಿಖಾ ತಂಡ (ಎನ್‌ಐಎ) ತನಿಖೆ ಮಾಡುವುದಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು. ಇದನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಪ್ರಕರಣದ ವಿಚಾರಣೆಯನ್ನು ಕೈಗೆತ್ತಿಕೊಂಡ ವಿಭಾಗೀಯ ಪೀಠ, ಎನ್‌ಐಎಗೆ ತನಿಖೆ ಮುಂದುವರಿಸಲು ಆದೇಶಿಸಿದೆ.

ಅಲ್ಲದೆ, ಈ ಸಂಬಂಧ ಆರೋಪ ಪಟ್ಟಿಯನ್ನು ಸಲ್ಲಿಸುವಂತೆಯೂ ಕೂಡ ನ್ಯಾಯಾಲಯ ಸೂಚನೆ ನೀಡಿದೆ. ಎನ್‌ಐಎ ವಿಚಾರಣೆ ಹೈಕೋರ್ಟ್‌ನ ತೀರ್ಪಿಗೆ ಒಳಪಟ್ಟಿರುತ್ತದೆ ಎಂದೂ ಕೂಡ ಹೈಕೋರ್ಟ್ ವಿಭಾಗೀಯ ಪೀಠ ಹೇಳಿದೆ.

## ತ.ನಾಡು ಸಚಿವರಿಗೆ ಐಟಿ ಶಾಕ್





ಚೆನ್ನೈ, ಏ. 7 – ಆದಾಯ ತೆರಿಗೆ ಅಧಿಕಾರಿಗಳು ಇಂದು ತಮಿಳುನಾಡಿನ ಆರೋಗ್ಯ ಸಚಿವ ಸಿ. ವಿಜಯಕುಮಾರ್ ಹಾಗೂ ಅವರ ಸಂಬಂಧಿಕರಿಗೆ ಸೇರಿದ ಚೆನ್ನೈ ಹಾಗೂ ರಾಜ್ಯದ ಇತರೆ ಜಿಲ್ಲೆಗಳಲ್ಲಿನ ಮನೆ ಹಾಗೂ ಕಚೇರಿಗಳ ಮೇಲೆ ಏಕಕಾಲಕ್ಕೆ ದಾಳಿ ನಡೆಸಿ, ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಐಟಿ ಅಧಿಕಾರಿಗಳು ಸಚಿವರೊಬ್ಬರ ಮನೆ ಮೇಲೆ ದಾಳಿ ನಡೆಸಿರುವುದು ಇದೇ ಮೊದಲಾಗಿದೆ.

ಸಚಿವರು ಹಾಗೂ ಅವರ ಸಂಬಂಧಿಕರ ಬಗ್ಗೆ ಆದಾಯ ತೆರಿಗೆ ಅಧಿಕಾರಿಗಳು ನಿಗಾ ಇಟ್ಟಿದ್ದರು. ಏಪ್ರಿಲ್ 12 ರಂದು ನಡೆಯಲಿರುವ ಆರ್.ಕೆ. ನಗರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಮತದಾರರ ಒಲವು ಗಳಿಸಲು ಹಣ ಹಂಚಿಕೆ ಮಾಡುತ್ತಿರುವಲ್ಲಿ ಸಚಿವರು ನೇರವಾಗಿ ಭಾಗಿಯಾಗಿದ್ದಾರೆಂಬ ದೂರುಗಳ ಹಿನ್ನೆಲೆಯಲ್ಲಿ ದಾಳಿ ನಡೆದಿದೆ ಎಂದು ತನಿಖಾಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಚಿವರಿಗೆ ಸೇರಿದ ಪುದುಕೋಟೈನಲ್ಲಿರುವ ಕಾಲೇಜು ಹಾಗೂ ಗಣಿಗಾರಿಕೆ ಘಟಕವೊಂದರ ಮೇಲೂ ದಾಳಿಗಳು ನಡೆದಿವೆ.

ಬೆಳಿಗ್ಗೆ 7 ಗಂಟೆಯಿಂದಲೇ ದಾಳಿಗಳು ನಡೆದಿವೆ. ಚೆನ್ನೈನ 19 ಕಡೆ, ತ್ರಿಚಿ, ಪುದುಕೋಟೈನ 30 ಕಡೆ ದಾಳಿ ನಡೆದಿದ್ದು, ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ.

**ಶರತ್ ಕುಮಾರ್ ಮನೆ ಮೇಲೂ ದಾಳಿ**

ತಮಿಳು ಚಲನಚಿತ್ರ ರಂಗದ ನಾಯಕ ನಟ ಶರತ್ ಕುಮಾರ್ ಹಾಗೂ ನಟಿ ರಾಧಿಕಾ ದಂಪತಿ ಅವರಿಗೆ ಸೇರಿದ ಚೆನ್ನೈನಲ್ಲಿರುವ ನಿವಾಸದ ಮೇಲೂ ಐಟಿ ಅಧಿಕಾರಿಗಳು ದಾಳಿ ನಡೆಸಿ ಪರಿಶೀಲನೆ ನಡೆಸುತ್ತಿದ್ದಾರೆ.




## ಮತದಾರರ ಮನೆಗಳಿಗೆ ಪ್ರದಕ್ಷಿಣೆ

**ನಂಜನಗೂಡು–ಗುಂಡ್ಲುಪೇಟೆ ಉಪಚುನಾವಣೆ ಸಮರ**

ಮೈಸೂರು, ಏ. 7 – ನಂಜನಗೂಡು ಹಾಗೂ ಗುಂಡ್ಲುಪೇಟೆ ಉಪಚುನಾವಣೆಗೆ ಕೇವಲ 2 ದಿನಗಳ ಬಾಕಿ ಉಳಿದಿದ್ದು, ಇಂದು ಸಂಜೆ ಬಹಿರಂಗ ಪ್ರಚಾರಕ್ಕೆ ತೆರೆ ಬೀಳಲಿದೆ. ನಂತರ ಮತದಾರರ ಮನೆಗಳಿಗೆ ಪ್ರದಕ್ಷಿಣೆ ಹಾಕುವ ಕೆಲಸದಲ್ಲಿ ಅಭ್ಯರ್ಥಿಗಳು ಮತ್ತು ಆಯಾ ಪಕ್ಷಗಳ ನಾಯಕರು ನಿರತರಾಗಲಿದ್ದಾರೆ. ಉಪ ಚುನಾವಣೆ ಜಿದ್ದಾಜಿದ್ದಿನಿಂದ ಕೂಡಿದ್ದು, ಮತದಾರನ ಒಲವು ಯಾರ ಪರ ಎಂಬುದು ಇನ್ನೂ ಗುಟ್ಟಾಗಿ ಉಳಿದಿದ್ದು, ಭಾನುವಾರ ನಡೆಯಲಿರುವ ಮತದಾನದ ಸಂದರ್ಭದಲ್ಲಿ ವಿದ್ಯುನ್ಮಾನ ಮತಯಂತ್ರಗಳಲ್ಲಿ ದಾಖಲಾಗಲಿದೆ.

ಚಾಮುಂಡೇಶ್ವರಿ ಉಪಚುನಾವಣೆಯ ನಂತರ ಅಬ್ಬರದ ಕಾಳಗಕ್ಕೆ ಕಾರಣವಾಗಿರುವ ಈ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಗೆಲುವಿಗಾಗಿ ತೀವ್ರ ಪೈಪೋಟಿ ನಡೆಸಿದ್ದು, ಸದ್ಯದ ಪರಿಸ್ಥಿತಿಯಲ್ಲಿ ಸಮಬಲ ಕಂಡು ಬರುತ್ತಿದೆ. ಸಚಿವ ಸ್ಥಾನ ವಂಚಿತರಾದ ವಿ. ಶ್ರೀನಿವಾಸ ಪ್ರಸಾದ್, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಡ್ಡು ಹೊಡೆದು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಅಭ್ಯರ್ಥಿಯಾಗಿ ನಂಜನಗೂಡು ವಿಧಾನಸಭಾ ಕ್ಷೇತ್ರದ ಉಪ ಚುನಾವಣಾ ಕಣದಲ್ಲಿದ್ದಾರೆ.

ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಬಂದಿರುವ ಕಳಲೆ ಕೇಶವಮೂರ್ತಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಶ್ರೀನಿವಾಸ್ ಪ್ರಸಾದ್ ವಿರುದ್ಧ ಸ್ಪರ್ಧೆಗಿಳಿದಿದ್ದಾರೆ. ಸಹಕಾರ ಸಚಿವರಾಗಿದ್ದ ಎಚ್.ಎಸ್. ಮಹದೇವ ಪ್ರಸಾದ್ ಅವರ ಅಕಾಲಿಕ ನಿಧನದಿಂದ ತೆರವಾದ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಅವರ ಪತ್ನಿ ಗೀತಾ ಮಹದೇವ ಪ್ರಸಾದ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ. ಮಹದೇವಪ್ರಸಾದ್ ಅವರ ವಿರುದ್ಧ 2 ಬಾರಿ ಸೋತಿದ್ದ ಬಿಜೆಪಿಯ ನಿರಂಜನ್ ಈ ಬಾರಿಯೂ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. (2)

## ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಚುನಾವಣಾಧಿಕಾರಿಗೆ ದೂರು

ಬೆಂಗಳೂರು, ಏ.7–ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಗುಂಡ್ಲುಪೇಟೆ ಕ್ಷೇತ್ರದ ಉಪಚುನಾವಣೆಯ ಪ್ರಚಾರ ಸಂದರ್ಭದಲ್ಲಿ ಮತದಾರರಿಗೆ ಹಣ ಹಂಚಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಿಜೆಪಿ ರಾಜ್ಯದ ಮುಖ್ಯ ಚುನಾವಣಾಧಿಕಾರಿಗಳಿಗೆ ದೂರು ನೀಡಿದೆ.

ಶಾಸಕ ವಿಜಯಕುಮಾರ್ ನೇತೃತ್ವದ ಬಿಜೆಪಿ ನಿಯೋಗ ಇಂದು ನಗರದ ಶೇಷಾದ್ರಿ ರಸ್ತೆಯಲ್ಲಿರುವ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಗೆ ತೆರಳಿ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ದೂರು ನೀಡಿತು. ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆಯಾಗಿರುವ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಗುಂಡ್ಲುಪೇಟೆ ಕ್ಷೇತ್ರದಲ್ಲಿ ಮತದಾರರಿಗೆ ಹಣ ಹಂಚುತ್ತಿರುವ ವಿಡಿಯೋವನ್ನು ಉಲ್ಲೇಖಿಸಿ ಬಿಜೆಪಿ ಮುಖ್ಯ ಚುನಾವಣಾಧಿಕಾರಿಗಳಿಗೆ ದೂರು ನೀಡಿದೆ.

ಕಾಂಗ್ರೆಸ್‌ನ ಮಹಿಳಾ ಮುಖಂಡರು ಹಣ ಹಂಚುತ್ತಿರುವುದು ಸ್ಪಷ್ಟವಾಗಿರುವುದರಿಂದ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆಯೂ ನಿಯೋಗ ಮನವಿ ಮಾಡಿದೆ.

ಗುಂಡ್ಲುಪೇಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಚುನಾವಣಾ ಅಕ್ರಮಗಳನ್ನು ನಡೆಸಲು ಪ್ರಯತ್ನ ನಡೆಸಿದ್ದು, ಇಲ್ಲಿ ಚುನಾವಣಾ ಕಾರ್ಯಗಳಿಗೆ ಅರೆಸೇನಾ ಸಿಬ್ಬಂದಿಯನ್ನು ನಿಯೋಜನೆ ಮಾಡುವಂತೆ ಬಿಜೆಪಿ ನಿಯೋಗ ಚುನಾವಣಾಧಿಕಾರಿಗಳಿಗೆ ಮನವಿ ಮಾಡಿದೆ. (8)

**ಚಿನಿವಾರಪೇಟೆ** ಮುಂಬೈ, ಏಪ್ರಿಲ್ 7 ಚಿನ್ನ: ಅಪರಂಜಿ 10 ಗ್ರಾಂ ₹ 29,670 22 ಕ್ಯಾರೆಟ್: 10ಗ್ರಾಂ ₹ 27,820 ಬೆಳ್ಳಿ: 1 ಕೆ.ಜಿ. ₹ 45,558